Major Irrigation is whether a prima facie case is made out against these Engineers? If it is so, what action the Police have taken to take the erred officials into Police of Judicial custody? ಸನ್ಮಾನ್ಯ ಸಭಾಧ್ಯಕ್ಷರೇ, ಈಗ ಏನಾಗಿದೆ ಎಂದರೆ, ಇವತ್ತು ಯಾವ ರೈತರು ಜಮೀನನ್ನು ಕಳೆದುಕೊಂಡಿದ್ದಾರೆ, ಯಾವ ರೈತರು ತಾವು ಕಷ್ಟಬಿದ್ದು ಸಂಪಾದನೆ ಮಾಡಿದಂಥ ಮನೆಗಳು ಮತ್ತು ಆಸ್ತಿಗಳನ್ನು ಇವತ್ತು ಈ ಯೋಜನೆಗೋಸ್ಕರ ಏನು ಅಕ್ವೈರ್ ಮಾಡಿಕೊಂಡಿದ್ದಾರೆ ಆ ಆಸ್ತಿಗೆ ನೀಡಬೇಕಾದಂಥ ಹಣ ದುರುಪಯೋಗವಾಗಿದೆ.

MR. SPEAKER: Alright. Let's find out from the Government.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಆದ್ದರಿಂದ ಈ ನಾಲ್ಕು ಕೇಸುಗಳನ್ನು ಏನು ರಿಜಿಸ್ಟರ್ ಮಾಡಿದ್ದಾರೆ, ಪ್ರೈಮಾಫೇಸಿಕೇಸ್ ಇದ್ದರೆ, ಏನು ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎನ್ನುವುದನ್ನು ದಯಮಾಡಿ ಮಂತ್ರಿಗಳು ಹೇಳಬೇಕು.

MR. SPEAKER: Let's find out.

ಶ್ರೀ ಕೆ.ಎನ್.ನಾಗೇಗೌಡ: ಅಧ್ಯಕ್ಷರೇ, ನನಗೆ ಒಂದು ಗಂಟೆಯ ಸಮಯವನ್ನು ಕೊಡಬೇಕು. ಏಕೆಂದರೆ ನನಗೆ ಈಗ 10 ನಿಮಿಷಗಳ ಹಿಂದೆ ಇದು ಬಂತು. ಸ್ವಲ್ಪ ಮಾಹಿತಿಯನ್ನು ತರಿಸಿದ್ದೇನೆ. ಆದರೆ ನನಗೆ ಇನ್ನೂ ವಿವರವಾದ ಮಾಹಿತಿಗಳು ಬೇಕಾಗಿವೆ.

MR. SPEAKER: Alright. Get all the details and report. ಈ ಯೋಗೀಶ್ ಭಟ್ ಅವರು ಮಾತನಾಡಬೇಕು.

(ಇ) ಮೈಸೂರು ನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ಮಲೇರಿಯಾ ರೋಗ ಹರಡುತ್ತಿರುವುದು.

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲಿ ಮತ್ತು ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ಮಲೇರಿಯಾ ರೋಗ ಹರಡುತ್ತಿದೆ. 1996ರಲ್ಲಿ ಸುಮಾರು 9,880 ಜನ ಮಲೇರಿಯಾ ಪೀಡಿತರಾಗಿದ್ದರು. ಅದೇ ರೀತಿ 1997ರಲ್ಲಿ ಜನವರಿಯಿಂದ ಮೇವರೆಗೆ ಸುಮಾರು 3,688 ಮಂದಿ ಮಲೇರಿಯಾ ಪೀಡಿತರಾಗಿದ್ದಾರೆ. ಅಪಾಯಕಾರಿ ಮಲೇರಿಯಾ ರೋಗಕ್ಕೆ ತುತ್ತಾದವರ ಸಂಖ್ಯೆ ಸಾಕಷ್ಟು ಇದೆ. ಕಳೆದ 2 ವರ್ಷಗಳಿಂದ ಸತತವಾಗಿ ಪೂರ್ಣ ಪ್ರಮಾಣದ ಅರ್ಬನ್ ಮಲೇರಿಯಾ ಯೂನಿಟ್ ಅನ್ನು ನಮಗೆ ಮಂಜೂರು

ಮಾಡಬೇಕೆಂದು ಸನ್ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ. ಈಗಿರುವಂಥ ವ್ಯವಸ್ಥೆಯಲ್ಲಿ ನಾವು ಸಾಕಷ್ಟು ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಅಲ್ಲಿರತಕ್ಕಂಥ ವೈದ್ಯರುಗಳು ಅವರೇ ಸಾಮೂಹಿಕವಾಗಿ ಒಂದು ಸಮಿತಿಯನ್ನು ಮಾಡಿಕೊಂಡು, ಜನಪ್ರತಿನಿಧಿಗಳೆಲ್ಲಾ ಒಟ್ಟು ಸೇರಿ ಜನಜಾಗೃತಿ ಉಂಟು ಮಾಡುವಂಥಾದ್ದು ಹಾಗೂ ಮನೆಮನೆಗಳಿಗೆ ಹೋಗಿ ಹೆಚ್ಚಿನ ಸೇವೆ ಸಲ್ಲಿಸುವಂಥ ಒಂದು ಕಾರ್ಯವನ್ನು ಮಾಡುತ್ತಿದ್ದಾರೆ. ಇಷ್ಟಿದ್ದರೂ, ಮಹಾನಗರಪಾಲಿಕೆಯ ಸಹಕಾರ ಇದ್ದರೂ ಕೂಡ, ನಮಗೆ ಪೂರ್ಣ ಪ್ರಮಾಣದ ಅರ್ಬನ್ ಮಲೇರಿಯಾ ಯೂನಿಟ್ಟನ್ನು ಮಂಜೂರು ಮಾಡದಿದ್ದರೆ ಸಾಕಷ್ಟು ಕೆಲಸ ಮಾಡಲು ಆಗುವುದಿಲ್ಲ. ಈಗಿರುವಂಥ ಫೈಲೇರಿಯಾ ಘಟಕ ಯಾವುದಿದೆ, ಅದನ್ನು ಪರಿವರ್ತನೆ ಮಾಡಿ, ಮಲೇರಿಯಾ ನಿಯಂತ್ರಣ ಘಟಕ ಎಂದು ಆದೇಶವನ್ನು ಕೊಡಬೇಕು ಎನ್ನುವ ವಿಶೇಷ ಮನವಿಯನ್ನು ಅಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಡಾ: ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೇ, ನಗರ ಮಲೇರಿಯಾ ಘಟಕ ಮತ್ತು ನಗರ ಫೈಲೇರಿಯಾ ಘಟಕಗಳ ಮೂಲ ಉದ್ದೇಶಗಳು ಒಂದೇ. ಅದು ಸೊಳ್ಳೆಯನ್ನು ನಿರ್ಮೂಲನೆ ಮಾಡತಕ್ಕಂಥ ಉದ್ದೇಶ. ಈಗಾಗಲೇ ಅಲ್ಲಿ ಒಂದು ನ್ಯಾಷನಲ್ ಫೈಲೇರಿಯಾ ಕಂಟ್ರೋಲ್ ಯೂನಿಟ್ ಕೆಲಸ ಮಾಡುತ್ತಿರುವುದರಿಂದ ಮತ್ತು ಅಗತ್ಯ ಬಿದ್ದರೆ ಅದನ್ನು ಅಪ್‌ಗ್ರೇಡ್ ಮಾಡಿ, ಹೆಚ್ಚುಜನ ಸಿಬ್ಬಂದಿಗಳನ್ನು ನೇಮಕ ಮಾಡಲು 1995ನೇ ಇಸವಿಯಲ್ಲೇ ನಾವು ಮಂಗಳೂರಿನ ನಗರಪಾಲಿಕೆಗೆ ಪತ್ರವನ್ನು ಬರೆದು, ನಮ್ಮ ಅಧಿಕಾರಿಗಳು ಖುದ್ದಾಗಿ ಹೋಗಿ ಸೂಚನೆಯನ್ನು ಕೊಟ್ಟಿದ್ದಾರೆ. ಸುಮಾರು 86 ಜನ ಸಿಬ್ಬಂದಿಯನ್ನು ನೇಮಕ ಮಾಡಲು ನಾವು ಹೇಳಿದ್ದೇವೆ. ಅಲ್ಲಿ ಕೊಂಕಣ ರೈಲ್ವೆ ಬಂದಮೇಲೆ ಮತ್ತು ಕಟ್ಟಡಗಳ ಕೆಲಸ ನಡೆಯುತ್ತಿರುವುದರಿಂದ ಹೆಚ್ಚು ಜನ ತಮಿಳುನಾಡು, ಒರಿಸ್ಸಾಗಳಿಂದ ವಲಸೆ ಬಂದು ಮಲೇರಿಯಾ ಹೆಚ್ಚು ಪ್ರಮಾಣದಲ್ಲಿ ಆಗಿರುವಂಥಾದ್ದು ಆಗಿದೆ. ಆದರೆ ಕಳೆದವರ್ಷ ಇದ್ದ ಒಂಭತ್ತು ಸಾವಿರ ಪ್ರಕರಣಗಳು ಈ ವರ್ಷ ಮೂರು ಸಾವಿರಕ್ಕೆ ಬಂದು ಇಳಿದಿದ್ದನ್ನು ನೋಡಿದಾಗ ಗಣನೀಯವಾಗಿ ಸುಮಾರು ಮೂವತ್ಮೂರು ಪರ್ಸೆಂಟ್‌ಗಿಂತ ಹೆಚ್ಚು ಮಲೇರಿಯಾ ರಾಜ್ಯದಲ್ಲಿ ಕಡಿಮೆಯಾಗಿದೆ. ಪ್ರತಿ ಸಾವಿರ ಜನರಿಗೆ ಹತ್ತು ಪರ್ಸೆಂಟ್ ಬ್ಲಡ್ ಲೇಪನ ಮಾಡತಕ್ಕಂಥ ಸಂದರ್ಭದಲ್ಲಿ 18.5 ಶೇಕಡ ಬ್ಲೆಡ್ ಲೇಪನಗಳನ್ನು ತೆಗೆದು ಪರೀಕ್ಷೆ ಮಾಡಿ ರಾಷ್ಟ್ರದಲ್ಲಿ ನಾವು ಮೊದಲನೆಯರಾಗಿದ್ದೇವೆ.

ಅಧ್ಯಕ್ಷರು: ಅವರು ಅರ್ಬನ್ ಮಲೇರಿಯಾ ಯೂನಿಟ್ ಮಾಡುವುದರ ಬಗ್ಗೆ ಹೇಳಿದ್ದಾರೆ.

ಡಾ: ಹೆಚ್.ಸಿ.ಮಹದೇವಪ್ಪ: ಅದನ್ನು ಸಹ ಹೇಳುತ್ತೇನೆ. ಅವರಿಗೆ ನಾವು ಬೈಲಾ

ಮಾಡಬೇಕೆಂದು ಹೇಳಿದ್ದೇವೆ ಮತ್ತು ಖರ್ಚು ಮಾಡುವ ದುಡ್ಡನ್ನು ನೇರವಾಗಿ ಕೊಡುವುದಕ್ಕೆ ಬರುವುದಿಲ್ಲ ಆದ್ದರಿಂದ ರಾಜ್ಯ ಸರ್ಕಾರ kindನಲ್ಲಿ ಏನು ಬೇಕಾದರೂ ಸಹಾಯ ಮಾಡಲು ಸಿದ್ಧವಿದೆ. ಈಗಾಗಲೇ ಸಿಬ್ಬಂದಿಗಳ ರಿಕ್ರೂಟ್‌ಮೆಂಟ್ ಆಗಿದೆ. 450 ಜನ ಮೇಲ್ ಹೆಲ್ತ್ ವರ್ಕರ್ಸ್ 250 ಜ್ಯೂನಿಯರ್ ಟೆಕ್ನಿಶಿಯನ್‌ಗಳನ್ನು ಅಪಾಯಿಂಟ್ ಮಾಡಿದ್ದೇವೆ. ಇವೊತ್ತು ರಾಷ್ಟ್ರದಲ್ಲಿ ಮಲೇರಿಯಾ ಅತೀ ಹೆಚ್ಚಾಗಿದೆ ಎಂದು ರಾಷ್ಟ್ರೀಯ ಸರ್ಕಾರ ಹೈದರಾಬಾದಿನಲ್ಲಿ ಸಭೆಗಳನ್ನು ನಡೆಸುತ್ತಿದೆ, ಚರ್ಚೆ ನಡೆಯುತ್ತಿದೆ, ಸುಮಾರು200 ಅಥವಾ 800 ಎಂದು ಖಚಿತವಾಗಿ ಗೊತ್ತಿಲ್ಲ ಆದರೆ ಅಷ್ಟು ಕೋಟಿ ರೂಪಾಯಿಗಳು ದುಡ್ಡು ಬೇಕು ಎಂದು ಒತ್ತಾಯಮಾಡುತ್ತಿದೆ. ರಾಜ್ಯ ಸರ್ಕಾರ ವ್ಯಾಪಕವಾಗಿ 165 ಪ್ರಾಬ್ಲಮ್ಯಾಟಿಕ್ ಪಿ.ಹೆಚ್.ಸಿ.ಗಳನ್ನು ಗುರುತಿಸಿದೆ, ಅಲ್ಲಿ ನಾವು ಸಮರ್ಪಕವಾಗಿ ಕೆಲಸ ಮಾಡುವುದರಿಂದ ಸುಮಾರು 30 ಪರ್ಸೆಂಟ್‌ಗಿಂತ ಹೆಚ್ಚು ಮಲೇರಿಯಾ ಕಡಿಮೆಯಾಗಿದೆ. ಮಂಗಳೂರಿನಲ್ಲಿ ಅವರದೇ ಆದಂಥ ಬೈಲಾಗಳನ್ನು ಮಾಡಿಕೊಂಡಿದ್ದಾರೆ.

(ಈ) ಮಾಗಡಿ ತಾಲ್ಲೂಕು ಸಾವನದುರ್ಗ ಪ್ರವಾಸಕ್ಕೆ ಹೋದ ಒಬ್ಬ ಹುಡುಗನ ಕೊಲೆ

ಶ್ರೀ ಎ.ಟಿ.ರಾಮಸ್ವಾಮಿ (ಆರಕಲಗೂಡು): ಮಾನ್ಯ ಅಧ್ಯಕ್ಷರೆ ದಿನಾಂಕ 13.7.1997ರಂದು ಬೆಂಗಳೂರಿನಿಂದ ಕುಶ ಮತ್ತು ಇನ್ನು ಇತರೆ ಒಟ್ಟು ಹನ್ನೊಂದು ಮಂದಿ ಮಾಗಡಿ ತಾಲ್ಲೂಕು ಸಾವನೂರು ದುರ್ಗಕ್ಕೆ ಪ್ರವಾಸ ಹೋದರು ಅಲ್ಲಿ ದರ್ಶನ ಮಾಡಿ ನಾಲ್ಕು ಗಂಟೆಗೆ ಬೆಟ್ಟದಿಂದ ಇಳಿದು ಬಂದರು ಆದರೆ ಕುಶ ಎಂಬ ಹುಡುಗ ಮಾತ್ರ ಬೆಟ್ಟದಿಂದ ಇಳಿದು ಬರಲಿಲ್ಲ. ಅವನು ತಪ್ಪಿಸಿಕೊಂಡಿದ್ದಾನೆ ಎಂದು ಅವನ ಜೊತೆಗಾರರು ಆ ಹುಡುಗನ ಮನೆಗೆ ಬಂದು ಹೇಳಿದರು. ಅದಾದ ಮೇಲೆ ಹದಿನೈದನೇ ತಾರೀಖು ಅವನು ತಪ್ಪಿಸಿಕೊಂಡಿದ್ದಾನೆ ಎಂದು ಹೇಳಿ ಅವನ ಸಹೋದ್ಯೋಗಿಗಳು ಮಾಗಡಿ ಪೋಲೀಸ್ ಸ್ಟೇಶನ್‌ಗೆ ಫಿರ್ಯಾದಿಯನ್ನು ಕೊಟ್ಟರು, ಬೆಟ್ಟಕ್ಕೆ ಹೋಗಿ ನಾಲ್ಕೈದು ದಿನಗಳ ಕಾಲ ಹುಡುಕಿದರು. ಒಂದು ಗುಹೆಯ ಹತ್ತಿರ ಒಂದು ಕಾಲಿನ ಚೀಲ ಸಿಕ್ಕಿತು ಎಂದು ಮನೆಯ ಹತ್ತಿರ ಬಂದು ತಿಳಿಸಿದರು. ದಿನಾಂಕ 1.8.1997ರಂದು ಬೆಟ್ಟದ ಮೇಲೆ ಒಂದು ಶವ ಸಿಕ್ಕಿದೆ ಎಂದು ತಿಳಿದಾಗ ಅವರ ತಂದೆ ತಾಯಿಗಳು ಹಾಗೂ ಸಂಬಂಧಿಗಳು ಹೋಗಿ ನೋಡಿದರು. ಅದು ಅವರ ಮಗನ ಶವವೆಂದು ಗೊತ್ತಾಯಿತು, ಮಾಗಡಿಯಲ್ಲಿ ಶವ ಪರೀಕ್ಷೆಯಾಯಿತು, ಕೊಲೆ ಶಂಕೆ ಇಲ್ಲ, ನೈಜ ಸಾವಿದೆ ಎಂದು ವೈದ್ಯರು ಹೇಳಿಕೆ ಕೊಟ್ಟರು. ಈ ತಂದೆ ತಾಯಿಗಳಿಗೆ ಅನುಮಾನ ಬಂದು ಡಿ.ಜಿ. ಆಫೀಸ್ ಮುಂದೆ ಶವವನ್ನು ತಂದು ಇಟ್ಟುಕೊಂಡರು ಆಗ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಶವ ಪರೀಕ್ಷೆಯಾಯಿತು. ಆಗ ಇದು ಆಕಸ್ಮಿಕ ಸಾವಲ್ಲ ಇದು ಕೊಲೆಯಾಗಿದೆ ಎಂದು ಪೋಸ್ಟ್ ಮಾರ್ಟ್‌ಮ್ ರಿಪೋರ್ಟ್ ಬಂತು. ಆದರೆ ಇದುವರೆಗೂ ಅಪರಾಧಿಗಳು ಯಾರು ಎಂದು ಕಂಡು ಹಿಡಿಯಲು ಮಾಗಡಿ ಪೋಲೀಸ್ ಠಾಣೆಯವರು ಕಾರ್ಯಕ್ರಮವನ್ನು ಹಮ್ಮಿಕೊಂಡಿಲ್ಲ. ಯಾವುದೋ ಕಾರಣದಿಂದ